# ಜಾಗತೀಕರಣ ಮತ್ತು ಸಾಂಸ್ಕೃತಿಕ ಗುಲಾಮಗಿರಿ

ಜಿ.ಎಸ್. ಜಯದೇವ

## ವಿಕಾಸದ ಮುನ್ನಡೆ

ವೈಜ್ಞಾನಿಕವಾಗಿ ಮನುಷ್ಯನನ್ನು *homo sapiens* ಎನ್ನುತ್ತಾರೆ. ಇದರರ್ಥ *thinking man* ಅಥವಾ ಯೋಚಿಸಬಲ್ಲ ಮನುಷ್ಯ ಎಂದು. ಯೋಚನಾ ಶಕ್ತಿಯುಳ್ಳ ಈ ಮನುಷ್ಯ-ಜಾತಿ ಹುಟ್ಟಿ ಸುಮಾರು ನಲವತ್ತು ಸಾವಿರ ವರ್ಷಗಳು ಕಳೆದಿವೆ. ಗುಹೆಗಳಲ್ಲಿ ಪ್ರಾಣಿಗಳ ಹಾಗೆ ವಾಸಿಸುತ್ತಿದ್ದ ಈ ಮನುಷ್ಯನ ಮನಸ್ಸು ನಿಧಾನವಾಗಿ ಜಾಗೃತವಾಯಿತು. ಅವನ ಕೈಬೆರಳುಗಳಂತೂ ವಿಕಾಸದ ಅದ್ಭುತ ಕೊಡುಗೆ. ಅವುಗಳ ಮುಖಾಂತರ ಪ್ರಾಣಿಪ್ರಪಂಚ ಹಿಂದೆಂದೂ ಕಂಡರಿಯದ ಕ್ಲಿಷ್ಟಕ್ರಿಯೆಗಳನ್ನು ಮಾಡತೊಡಗಿದ. ಶಿಲ್ಪಕಲೆ ಚಿತ್ರಕಲೆಗಳು ಮೂಡತೊಡಗಿದವು. ಈ ಸಾಧ್ಯತೆಯ ಜೊತೆಜೊತೆಗೆ ಅವನ ಕಲ್ಪನಾ ಶಕ್ತಿ ಹೊಸ ಆಯಾಮಗಳಿಗೆ ವಿಕಾಸಗೊಂಡಿತು. ಈ ಕಲ್ಪನಾ ಶಕ್ತಿ ತಂದುಕೊಡುವ ಅದಮ್ಯ ಉತ್ಸಾಹ ತಾನೊಬ್ಬ ವಿಶ್ವಮಾನವನಾಗಬೇಕು ಎಂಬ ಹಂಬಲವನ್ನು ಹುಟ್ಟಿಸಿತು. ತನಗೆ ಸಾಧ್ಯವಾಗದ್ದು ಯಾವುದು ಎಂಬ ಭಾವನೆಯಿಂದ ಸೂರ್ಯ, ಚಂದ್ರ, ತಾರೆಗಳನ್ನು ಲೆಕ್ಕಿಸದೆ ಈ ಪುಟ್ಟ ಭೂಮಿಯ ಸೆಳೆತದಿಂದ ಚಿಮ್ಮಿ ವಿಶ್ವವ್ಯಾಪಿಯಾಗಲು ಪ್ರಯತ್ನಿಸಿದ. ಅಜ್ಞಾನ ಸೃಷ್ಟಿಸಿದ ಮಿಥ್ಯೆಗಳನ್ನೆಲ್ಲ ಕಿತ್ತೆಸೆದ. ಹೀಗೆ ವಿಜ್ಞಾನದ ನೆರವಿನಿಂದ ಅದ್ಭುತಗಳನ್ನು ಸಾಧಿಸಿದ. ಅದರ ಜೊತೆ ಜೊತೆಗೆ ಈ ವಿಶ್ವದ ವಿಸ್ತಾರದಲ್ಲಿ ತಾನೆಷ್ಟು ಚಿಕ್ಕವನು ಎಂಬ ವಾಸ್ತವವನ್ನೂ ಅರಿತುಕೊಂಡ.

> ಜಾಗತೀಕರಣದಿಂದ ಸಾಂಸ್ಕೃತಿಕ ವೈವಿಧ್ಯತೆ ನಾಶವಾಗುತ್ತಿದೆಯೆ? ಮಾನವೀಯ ಮೌಲ್ಯಗಳು ಕುಸಿಯುತ್ತಿವೆಯೆ? ಜಾಗತೀಕರಣದ ವಿಶ್ಲೇಷಣಾತ್ಮಕ ಅಧ್ಯಯನ ಈ ಲೇಖನ. ಶ್ರೀ ಜಯದೇವ ಅವರು "ದೀನಬಂಧು" "ಶಕ್ತಿಧಾಮ" ಮುಂತಾದ ಸೇವಾಸಂಸ್ಥೆಗಳನ್ನು ನಡೆಸುತ್ತಿರುವರು.

## ಜಾಗತೀಕರಣವು ಭೂಮದೃಷ್ಟಿಯ ವಿಕೃತರೂಪ

ಆದರೂ ತನ್ನ ಮಿತಿಗಳನ್ನು ಒಪ್ಪುವವನಲ್ಲ ಈ ಮನುಷ್ಯ. ಹೊರಗೋಡುತ್ತಿದ್ದ ಮನಸ್ಸನ್ನು ಒಳಗೆ ತಿರುಗಿಸಿ ನೋಡಿದ. ಅಲ್ಲೂ ಅದೇ ಹಂಬಲ. ನನ್ನ ಅಸ್ತಿತ್ವ ಕೇವಲ ದೇಹಕ್ಕೆ ಸೀಮಿತವಲ್ಲ; ನಾನೊಬ್ಬ ವಿಶ್ವವ್ಯಾಪಿ ಆತ್ಮ ಎಂದು ಭಾವಿಸಿದ. ಯಾವ ಅಸ್ತಿತ್ವದ ಸತ್ವ ನನ್ನಲ್ಲಿದೆಯೊ ಅದೇ ಎಲ್ಲೆಡೆಯಲ್ಲೂ ಇದೆ. ಆದ್ದರಿಂದ ನಾನೊಬ್ಬ ವಿಶ್ವಮಾನವ ಎಂದು ಸಾರಿದ.

ವಿಸ್ತಾರಗೊಳ್ಳುವ ಈ ಹಂಬಲ ಎಲ್ಲ ಮನುಷ್ಯರ ಮನದ ಮೂಲ ತುಡಿತ. ಅಲ್ಪ ತೃಪ್ತಿ ಎಂಬುದು ಇವನಿಗೆ ಇಲ್ಲವೇ ಇಲ್ಲ. ಸದಾ ಭೂಮದ ಕಡೆಗೇ ಇವನ ದೃಷ್ಟಿ. ಈ ಭೂಮದೃಷ್ಟಿಯ ವಿಕೃತ, ಭೌತಿಕ ರೂಪವೆ ಜಾಗತೀಕರಣ. ಅಂತರಂಗದಲ್ಲಿ ಅನುಭಾವವಾಗಬೇಕಾದ ಈ ತುಡಿತ ಭೌತಿಕವಾಗಿ ಸಾರ್ಥಕತೆ ಪಡೆಯಲು ಹೊರಟಿತು. ಹೀಗೆ ಜಾಗತೀಕರಣದ ಕನಸು ಇಂದು ನೆನ್ನೆಯದಲ್ಲ. ಮನುಷ್ಯ ತನ್ನ ಕಲ್ಪನಾ ಶಕ್ತಿಯನ್ನು ಪಡೆದುಕೊಂಡಾಗಲೆ ಜಾಗತೀಕರಣದ ಮೊದಲ ಕನಸುಗಳನ್ನು ಕಾಣತೊಡಗಿದ. ಆದರೆ ಅದು ಸಾಧ್ಯವಾದದ್ದು ಇತ್ತೀಚಿನ ವೈಜ್ಞಾನಿಕ ದಿನಗಳಲ್ಲಿ ಮಾತ್ರ.

## ಜಾಗತೀಕರಣದ ಪ್ರಯೋಜನಗಳು

ಜಾಗತೀಕರಣದಿಂದ ಅನೇಕ ಅನುಕೂಲಗಳಿವೆ. ಸಮೂಹ ಮಾಧ್ಯಮಗಳಿಂದಾಗಿ ವಿಶ್ವದ ಒಂದು ಮೂಲೆಯ ವೈಜ್ಞಾನಿಕ ಸಂಶೋಧನೆಯ ಲಾಭ ಜಗದ್‌ವ್ಯಾಪಿಯಾಗಿ ಎಲ್ಲರಿಗೂ ಲಭಿಸುತ್ತದೆ. ವಿಶ್ವದ ಬೇರೆ ಬೇರೆ ಮೂಲೆಗಳಲ್ಲಿರುವ ಜನ ನಿರ್ದಿಷ್ಟ ವಿಷಯದ ಬಗ್ಗೆ ತಮ್ಮೆಲ್ಲರ ಅನುಭವಗಳನ್ನು ಕ್ಷಣಾರ್ಧದಲ್ಲಿ ಕ್ರೋಡೀಕರಿಸಿ ತಮ್ಮ ಸಂಶೋಧನೆಯನ್ನು ಫಲಪ್ರದವಾಗಿ ಪರಸ್ಪರ ಸಹಕಾರದಿಂದ ಮುಂದುವರಿಸಬಹುದು. ಭೌತಿಕವಾಗಿ ಭೂಗೋಳದ ಅಂತರ ಕುಸಿದು ನೆನೆದಾಗ ಜಗತ್ತಿನ ಮೂಲೆ ಮೂಲೆಗಳಲ್ಲಿ ನಾವು ಸಂಚರಿಸಬಹುದಾಗಿದೆ. ಜಗತ್ತಿನ ಮೂಲೆ ಮೂಲೆಗಳಲ್ಲಿ ವಾಸಿಸುವ ಜನಗಳ ಸುಖ-ದುಃಖಗಳಿಗೆ ಸ್ಪಂದಿಸುವಂತೆ ಇದು ಮಾಡುತ್ತದೆ, ಭಾವನಾತ್ಮಕವಾಗಿ ಇಡೀ ಭೂಮಿಯನ್ನು ಒಂದುಗೂಡಿಸುತ್ತದೆ.

## ಸಮೂಹಮಾಧ್ಯಮಗಳ ಪಾತ್ರ

ಸಮೂಹ ಮಾಧ್ಯಮಗಳು ಜಾಗತೀಕರಣದ ಪ್ರಬಲ ಸಾಧನ. ಇಂದು ನಾವು ಕಾಣುತ್ತಿರುವಷ್ಟು ಪ್ರಮಾಣದ ಜಾಗತೀಕರಣ ಸಾಧ್ಯವಾಗಿರುವುದು ಈ ಸಮೂಹ ಮಾಧ್ಯಮಗಳಿಂದಲೆ. ಆದರೆ ಬಹುತೇಕ ಸಮೂಹ ಮಾಧ್ಯಮಗಳು ಒಂದಲ್ಲ ಒಂದು ವಿಧದಲ್ಲಿ ಬಂಡವಾಳಶಾಹಿ ಆರ್ಥಿಕ ಸಂಸ್ಥೆಗಳ ಅಧೀನಕ್ಕೆ ಒಳಪಟ್ಟಿವೆ. ಈ ಬೃಹತ್ ಆರ್ಥಿಕಸಂಸ್ಥೆಗಳು ಆರ್ಥಿಕವಾಗಿ ಮಾತ್ರ ಅಳೆಯಬಹುದಾದ ಯಶಸ್ಸನ್ನು ಗುರಿಯಾಗಿಟ್ಟುಕೊಂಡು ಸಮೂಹ ಮಾಧ್ಯಮದ ಮುಖಾಂತರ ಮನುಷ್ಯರ ಮನಸ್ಸನ್ನು ತಮ್ಮ ಆವಶ್ಯಕತೆಗಳಿಗೆ ತಕ್ಕಂತೆ ನಿಯಂತ್ರಿಸುತ್ತವೆ. ಮಾನವೀಯ

## ಜಾಗತೀಕರಣದ ವಿವಿಧರೂಪ

ಜಾಗತೀಕರಣವೆಂದರೆ ಕೇವಲ ಮುಕ್ತ ಆರ್ಥಿಕ ವ್ಯವಹಾರವೆಂದಾಗಲಿ, ಎಲ್ಲವನ್ನೂ ಖಾಸಗೀ ಸಂಸ್ಥೆಗಳಿಗೆ ವಹಿಸುವುದೆಂದಾಗಲಿ ಅಲ್ಲ. ಜಾಗತೀಕರಣವು ವಿವಿಧ ಹಂತಗಳಲ್ಲಿ ನಡೆಯುತ್ತಿದೆ — ಅದು ಆರ್ಥಿಕ ಸ್ಥಿತಿಯನ್ನು ಸಮಗ್ರಗೊಳಿಸುತ್ತಿದೆ, ಕುಟುಂಬಗಳ ಸ್ವರೂಪವನ್ನು ಬದಲಾಯಿಸುತ್ತಿದೆ, ಸ್ತ್ರೀ ಸಮಾನತೆಯ ಭಾವವನ್ನೂ ವಾತಾವರಣವನ್ನೂ ಶಿಕ್ಷಣವನ್ನೂ ಸಾರ್ವತ್ರಿಕಗೊಳಿಸುತ್ತಿದೆ, ಮತ್ತು ಸರ್ಕಾರಗಳ ಪಾತ್ರವನ್ನು ಬದಲಾಯಿಸುತ್ತಿದೆ. ಜಾಗತೀಕರಣವೆಂದರೆ ಕೇವಲ ಆರ್ಥಿಕ ಉದಾರೀಕರಣವೆಂದು ನಂಬುವುದು ದೊಡ್ಡ ತಪ್ಪು. ಜಾಗತೀಕರಣವು ನಮ್ಮ ಸಮಾಜದ ಸ್ವರೂಪವನ್ನೇ, ನಮ್ಮ ಜೀವನವಿಧಾನವನ್ನೇ ಬದಲಾಯಿಸುತ್ತಿದೆ. ಪಶ್ಚಿಮವೇ ಇಡೀ ಸಮಾಜವನ್ನು ಆಳುವಂತಾಗಿದೆ. ಇನ್ನೊಂದು ಹಂತದಲ್ಲಿ ಅದು ಮೂಲಭೂತವಾದದ ಜಾಗೃತಿಗೆ ಕಾರಣವಾಗಿದೆ. ಜಾಗತೀಕರಣದಿಂದ ತಮ್ಮ ಸಂಪ್ರದಾಯವು ನಾಶವಾಗುವುದೆಂಬ ಭಯದಿಂದ ಜನರು ಹಿಂಸಾತ್ಮಕವಾಗಿ ಮತ್ತು ಅವಿಚಾರಿತವಾಗಿ ಪ್ರತಿಕ್ರಿಯಿಸುವುದೇ ಮೂಲಭೂತವಾದ. ಇದು ಜಾಗತೀಕರಣದ ಶಿಶು.

*—ಪ್ರೊ. ಆ್ಯಂಥೋಣಿ ಗಿಡ್ಡೆನ್ಸ್, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ನಿರ್ದೇಶಕರು.*

ಮೌಲ್ಯಗಳು ಈ ಸಂಸ್ಥೆಗಳ ಮೊದಲ ಆದ್ಯತೆ ಆಗಲಾರವು. ಒಂದು ವೇಳೆ ಈ ಆರ್ಥಿಕ ಸಂಸ್ಥೆಗಳು ಮಾನವೀಯ ಮೌಲ್ಯಗಳನ್ನು ಬಳಸಿಕೊಂಡಂತೆ ಕಂಡರೂ ಅದು ಕೇವಲ ತಮ್ಮ ಸರಕುಗಳ ಮಾರಾಟಕ್ಕೆ ಉಪಯುಕ್ತವಾಗುವಷ್ಟು ಮಾತ್ರ.

### ಮೂಲ ಸಂಸ್ಕೃತಿಯ ಮೂಲೋತ್ಪಾಟನ

ಹೀಗೆ ಆರ್ಥಿಕ ಸಂಸ್ಥೆಗಳು ತಮ್ಮ ಸರಕು ಮಾರಾಟಕ್ಕೆ ಇಡೀ ಪ್ರಪಂಚದ ಸಂಸ್ಕೃತಿಯನ್ನು ಬದಲಿಸಿ ಸಾಂಸ್ಕೃತಿಕ ಗುಲಾಮಗಿರಿಗೆ ಎಲ್ಲ ಜನರನ್ನು ಒಳಪಡಿಸುತ್ತವೆ. ಅವರವರ ಸಂಸ್ಕೃತಿಗೆ ಅನುಗುಣವಾಗಿ ಆ ಸಮಾಜದ ಆವಶ್ಯಕತೆಗಳಿರುತ್ತವೆ. ಹೀಗಿರುವ ಈ ಮೂಲ ಸಂಸ್ಕೃತಿಯು ಬಂಡವಾಳಶಾಹಿಗಳ ಸರಕು ಮಾರಾಟಕ್ಕೆ ಅನುಕೂಲವಲ್ಲದಿರಬಹುದು. ಆದರೆ ಸಮೂಹ ಮಾಧ್ಯಮಗಳ ಮುಖಾಂತರ ಮಾನವ ಸಹಜ ದೌರ್ಬಲ್ಯಗಳನ್ನು ಬಂಡವಾಳ ಮಾಡಿಕೊಂಡು

> ನಿಜವಾಗಿ ಹೇಳಬೇಕೆಂದರೆ ಜಾಗತೀಕರಣವೆಂದರೆ ಪಾಶ್ಚಾತ್ಯೀಕರಣ, ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅಮೆರಿಕೀಕರಣ.
>
> — ಅಸ್ಗರ್ ಅಲಿ ಇಂಜಿನೀರ್ (ಆಂಗ್ಲ ಪತ್ರಿಕೆ '*ವೇದಾಂತ ಕೇಸರಿ*' ಯಿಂದ)

ಅನ್ಯ ಸಂಸ್ಕೃತಿ ಸಂಪ್ರದಾಯಗಳನ್ನು ಈ ಜನಾಂಗದ ಮೇಲೆ ಹೇರುವ ಕೆಲಸ ನಡೆದಿದೆ. ಮಾನವನ ಸಹಜ ದೌರ್ಬಲ್ಯ ಗಳಾದ ಕಾಮ, ಹಿಂಸೆ ಮತ್ತು ಒಣಪ್ರತಿಷ್ಠೆಯ ಆಸೆಗಳನ್ನು ಬಳಸಿಕೊಂಡು ಜಾಹೀರಾತುಗಳ ಮುಖಾಂತರ ಜನರನ್ನು ಹೊಸ ಸಂಪ್ರದಾಯಕ್ಕೆ, ಹೊಸ ಜೀವನ ವಿಧಾನಕ್ಕೆ ಬದಲಿಸುವ ಕೆಲಸ ನಡೆದಿದೆ. ಮಾನವ ಸಹಜ ದೌರ್ಬಲ್ಯಗಳನ್ನು ಬಳಸಿ ತಮ್ಮ ಸರಕು ಮಾರಾಟಕ್ಕಾಗಿ ನಮ್ಮ ಗಮನ ಸೆಳೆಯುವ ತಂತ್ರವನ್ನು ಈ ಸಮೂಹ ಮಾಧ್ಯಮಗಳು ಎಷ್ಟರಮಟ್ಟಿಗೆ ಬಳಸುತ್ತವೆ ಎಂಬುದನ್ನು ನಮ್ಮ ಟಿ.ವಿ. ಜಾಹೀರಾತುಗಳನ್ನು ನೋಡಿದರೆ ತಿಳಿಯುತ್ತದೆ. ಸರಳ ಮನಸ್ಸಿನ ಮುಗ್ಧ ಜನರು ಈ ಜಾಹೀರಾತುಗಳನ್ನು ನೋಡಿ ಬಹಳ ಬೇಗ ಪ್ರಭಾವಿತರಾಗುತ್ತಾರೆ. ಈ ಜಾಹೀರಾತುಗಳು ಕಾಮ ಮತ್ತು ಹಿಂಸೆಯ ಜೊತೆಜೊತೆಗೆ ಬರುವುದರಿಂದ ಅವು ಮನುಷ್ಯನ ತರ್ಕ ಶಕ್ತಿಯನ್ನು ಮೊಟಕುಗೊಳಿಸಿ ಮನಸ್ಸಿನ ಆಳದಲ್ಲಿ ಈ ಸರಕುಗಳ ಆಸೆಯನ್ನು ಬಿತ್ತುತ್ತವೆ, ಆವಶ್ಯಕತೆಗಿಂತ ಹೆಚ್ಚಾಗಿ ಒಣಪ್ರತಿಷ್ಠೆಗಾಗಿ ವಸ್ತುಗಳನ್ನು ಕೊಳ್ಳುವ ಒಂದು ಬಗೆಯ ಬಕಾಸುರ ಸಂಸ್ಕೃತಿಯನ್ನು ಹುಟ್ಟು ಹಾಕುತ್ತವೆ.

### ನೈತಿಕ ಅಧಃಪತನ

ನಮ್ಮವಲ್ಲದ ಹೊಸಬಗೆಯ ವಸ್ತುಗಳು ನಮ್ಮ ಪರಿಸರವನ್ನು ಪ್ರವೇಶಿಸಿದಾಗ ಅವುಗಳ ಜೊತೆಗೆ ಹೊಸಬಗೆಯ ಹಾವಭಾವಗಳೂ ನಮ್ಮ ಸಂಸ್ಕೃತಿಯನ್ನು ಪ್ರವೇಶಿಸುತ್ತವೆ. ಉದಾಹರಣೆಗೆ ಹೊಸ ಬಗೆಯ ಉಡುಗೆ ತೊಡುಗೆಗಳು. ಇವು ಯುವಜನಾಂಗದ ಹಾವಭಾವಗಳ, ಯೋಚನಾಲಹರಿಯ ಮೇಲೆ ಬಹಳಷ್ಟು ಪ್ರಭಾವ ಬೀರುತ್ತವೆ. ಆದ್ದರಿಂದ ಒಂದು ಸಮಾಜದ ಮೌಲಿಕ ಆದ್ಯತೆಗಳು ಕೂಡ ಬದಲಾಗುತ್ತ ಬರುತ್ತವೆ. ಮೇಲ್ನೋಟಕ್ಕೆ ಹೊಸ ಬಗೆಯ ಉಡುಪುಗಳು ಆತಂಕಕಾರಿಯಾಗಿ ಕಾಣದಿರಬಹುದು. ದೇಹದ ಅಂಗಾಂಗಳನ್ನು ಮುಚ್ಚಲು ಉಡುಪುಗಳನ್ನು ತಯಾರಿಸುತ್ತೇವೆ, ಅಷ್ಟೆ. ಆದರೆ ಅಂಗಾಂಗಗಳು ಮುಚ್ಚಿದ್ದೂ ಸ್ಪಷ್ಟ ಆಕಾರಗಳಲ್ಲಿ ಗೋಚರಿಸಬೇಕೆಂಬ ಉದ್ದೇಶದಿಂದ ಈ ನವೀನ ಉಡುಪುಗಳನ್ನು ತಯಾರಿಸಿರುವುದರಿಂದ ಒಂದು ಬಗೆಯ ಅಶ್ಲೀಲತೆ ನಮ್ಮ ಸಂಸ್ಕೃತಿಯನ್ನು ಪ್ರವೇಶಿಸುತ್ತದೆ. ನಿಯಂತ್ರಣದಲ್ಲಿದ್ದ ಇಂದ್ರಿಯಾಸಕ್ತಿ ಕೆರಳುವಂತೆ ಮಾಡುತ್ತದೆ. ಯಾವಾಗ ಇಂದ್ರಿಯಾಸಕ್ತಿ ಕೆರಳಿ ಮನಸ್ಸು ಕಾಮದ ಕೈಗೆ ಸಿಗುತ್ತದೊ ಆಗ ಸುಪ್ತ ಪ್ರಲೋಭನೆಗಳು ಗರಿಗೆದರುತ್ತವೆ; ಸತಿ-ಪತಿಯರ ನಡುವಿನ ನಿಷ್ಠೆ ಕಡಿಮೆಯಾಗುತ್ತದೆ. ಇಂದ್ರಿಯಾಸಕ್ತಿಯ ತೃಪ್ತಿಗೆ ಅಡ್ಡ ಬರುವ ಅಡಚಣೆಗಳು ಹಿಂಸೆಗೆ ಕಾರಣವಾಗುತ್ತವೆ. ಅಡಚಣೆ ಮಾಡುವ ಹಿರಿಯರ ಬಗ್ಗೆ ಗೌರವ ಇಲ್ಲದಾಗುತ್ತದೆ. ಸಂಯಮ ಮೌಲ್ಯವಲ್ಲ, ಬದಲಿಗೆ ಮಾನಸಿಕ ಖಾಯಿಲೆಗಳಿಗೆ ಎಡೆಮಾಡುವ ಅಸಂಬದ್ಧ ಕಲ್ಪನೆ ಎಂಬ ನಿರ್ಧಾರಕ್ಕೆ ಯುವಜನ ಬಂದು ನಿಲ್ಲುತ್ತಾರೆ.

## ಸರಳಜೀವನದ ಸ್ಥಳಾಂತರ

ನಮ್ಮ ಪರಿಸರದಲ್ಲಿ ಲಭ್ಯವಿರುವ ವಸ್ತುಗಳಿಗೂ ನಮ್ಮ ಸಂಸ್ಕೃತಿಗೂ ಪರಸ್ಪರ ಗಾಢ ಸಂಬಂಧ ಇರುತ್ತದೆ. ವಸ್ತುಗಳು ಹೆಚ್ಚು ಸಿಕ್ಕಂತೆಲ್ಲ ಅವನ್ನು ಬಳಸುವ ಇಚ್ಛೆಯಾಗುತ್ತದೆ. ಅವುಗಳನ್ನು ಬಳಸುತ್ತ ಬಳಸುತ್ತ ಅದೊಂದು ಆವಶ್ಯಕತೆಯಾಗಿ ಬಿಡುತ್ತದೆ. ಆವಶ್ಯಕತೆ ಅವಲಂಬನೆಯಾಗಿ, ಅವಲಂಬನೆ ಕ್ಷೋಭೆಗೆ ಕಾರಣ ವಾಗುತ್ತದೆ. ನಮ್ಮದೇ ಆದ ಸಾಂಸ್ಕೃತಿಕ ಪರಿಸರದಲ್ಲಿದ್ದ ಶಾಂತಿ, ಸಮಾಧಾನ, ಅಲ್ಪತೃಪ್ತಿಗಳು ಬದಲಾದ ಸಾಂಸ್ಕೃತಿಕ ವಾತಾವರಣ ದಲ್ಲಿ ಇಲ್ಲವಾಗುವುದನ್ನು ನಾವು ಕಾಣುತ್ತೇವೆ. ಹೀಗೆ ಶಾಂತಿ ಸಮಾಧಾನಗಳನ್ನು ಕಳೆದುಕೊಂಡ ಜನ ಅವನ್ನು ಹೊರ ಜಗತ್ತಿನ ಸರಕುಗಳಲ್ಲೇ ಮತ್ತೆ ಹುಡುಕುತ್ತ ಬಹುರಾಷ್ಟ್ರೀಯ ಕಂಪನಿಗಳ ಗುಲಾಮಗಿರಿಗೆ ಒಳಗಾಗುತ್ತಾರೆ. ಜಾಗತೀಕರಣದ ಅಸಾಧಾರಣ ಸಾಧನೆಯೆಂದರೆ ಅದು ಮನುಷ್ಯನ ಸರಳ ಜೀವನವನ್ನು ಸ್ಥಳಾಂತರಿಸಿ, ಅವಲಂಬನೆಗಳಿಂದ ಕ್ಲಿಷ್ಟವಾದ, ಸದಾ ಆತಂಕಗಳ, ಅನಿಶ್ಚಯತೆಯ ಜೀವನವನ್ನುಂಟುಮಾಡುವ ಭಾವನಾಸಂದೇಶವನ್ನು ಸದಾ ಬಿತ್ತುತ್ತಿರುವುದು.

ಜಾಗತೀಕರಣದ ಬಹುಮುಖಿ ಉಪಯೋಗಕ್ಕೆ ನಾವು ಸೃಜನಶೀಲ ಶಕ್ತಿಯನ್ನೇ ದಂಡವಾಗಿ ತೆರಬೇಕಾಗಿದೆ. ಜಾಗತೀಕರಣ ಸ್ಥಳೀಯ ಸೃಜನಶೀಲತೆಯ ಸ್ಥಳವನ್ನು ಒಂದು ಬಗೆಯ ಸಾರ್ವತ್ರಿಕ ರಚನಾತ್ಮಕತೆಯಿಂದ ತುಂಬಿಬಿಡುತ್ತದೆ. ಸೃಜನಶೀಲತೆ ಸ್ಥಳೀಯವಾಗಿ ಮಾತ್ರ ಲಭ್ಯವಿರುವ, ಬದುಕಿಗೆ ಅತ್ಯಂತ ಹತ್ತಿರವಿರುವ ಅನುಭವಗಳಿಂದ ಮಾತ್ರ ಹುಟ್ಟುವಂಥಾದ್ದು. ಆದರೆ ಜಾಗತೀಕರಣ ಬದುಕಿನ ವಿಭಿನ್ನ ಅನುಭವಗಳ ಸರಾಸರಿಯನ್ನು ಮನುಷ್ಯನಿಗೆ ಕ್ಷಣಾರ್ಧದಲ್ಲಿ ಒದಗಿಸಿಬಿಡುವುದರಿಂದ ಅವನಲ್ಲಿ ಹುಟ್ಟುವ ಸೃಜನಶೀಲ ಶಕ್ತಿ, ಯಾವುದೇ ಬಗೆಯ ಬೇರುಗಳಿಲ್ಲದ ಸಾರ್ವತ್ರಿಕ ಸಮನ್ವಯದ ಅಭಿವ್ಯಕ್ತಿ ಮಾತ್ರ ಆಗಬಲ್ಲದು. ಇಂತಹ ಸೃಜನಶೀಲತೆ ಮಣ್ಣಿನ ವಾಸನೆಯಿಂದ ದೂರ ನಿಂತು, ಕಂಪ್ಯೂಟರ್ ಕೊಡುವ ನಿಖರತೆಯನ್ನು ಪಡೆದು ಕಲಾತ್ಮಕತೆಯನ್ನು ಕಳೆದು ಕೊಳ್ಳುತ್ತದೆ.

## ಜಾಗತೀಕರಣದಿಂದ ನಮ್ಮ ಸಂಸ್ಕೃತಿಯ ಪಾಡೇನು?

ಸ್ಥಳೀಯ ಅನುಭವಗಳು ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಂಡು ಸೃಜನಶೀಲ ನೆಲೆಗಟ್ಟಿನಲ್ಲಿ ಅಭಿವ್ಯಕ್ತಿ ಪಡೆದು, ಹೊಸ ಅನುಭವದ ಸಾರದಿಂದ ಪುಷ್ಟಿಗೊಂಡು ವಿಭಿನ್ನ ಸಂಸ್ಕೃತಿಗಳು ಉಂಟಾಗುತ್ತವೆ. ಆದರೆ ಜಾಗತೀಕರಣದ ಲಾಭ ಪಡೆಯುತ್ತಿರುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಸರಕು ಮಾರಾಟಕ್ಕಾಗಿ ಸಮೂಹ ಮಾಧ್ಯಮಗಳ ಮುಖಾಂತರ ಈ ಸಾಂಸ್ಕೃತಿಕ ವೈವಿಧ್ಯವನ್ನು ನಾಶಮಾಡುತ್ತಿರುವುದು ದುರದೃಷ್ಟಕರ. ಭಾರತದ ಸಾಂಸ್ಕೃತಿಕ ಸಾಗರದಲ್ಲಿ ಹೇಗೆ ಹೊಸ ಧರ್ಮಗಳು, ಅನ್ಯ ಸಂಪ್ರದಾಯಗಳು ಕರಗಿ ಮೂಲ ಸಂಸ್ಕೃತಿಯು ಕಡೆಗೆ ಶಾಶ್ವತವಾಗಿ ಉಳಿಯಿತೆಂಬ ವಿಷಯವನ್ನು ಸ್ವಾಮಿ ವಿವೇಕಾನಂದರು ಹೆಮ್ಮೆಯಿಂದ ಹೇಳಿದ್ದರು. ಆದರೆ ಜಾಗತೀಕರಣದ ಬೃಹತ್‌ಶಕ್ತಿಯ ವಿರುದ್ಧ ನಮ್ಮ ಸಂಸ್ಕೃತಿ ತನ್ನತನವನ್ನು ಉಳಿಸಿಕೊಂಡೀತೆ ಎಂಬ ಆತಂಕ ಎಲ್ಲರನ್ನೂ ಕಾಡಿದೆ. ಯಾವುದು ಸತ್ಯವೋ, ಯಾವುದು ಸಾರವಾದದ್ದೋ, ಅದು ಮಾತ್ರ ಉಳಿದು ಹೊಸದಾಗಿ ಆವರಿಸಿದ ಭ್ರಮೆಗಳೆಲ್ಲವೂ ಒಂದಲ್ಲ ಒಂದು ದಿನ—ಗಾಳಿಗೆ ಚೆದುರುವ ಮೋಡಗಳ ಹಾಗೆ—ಚೆದುರಲೇಬೇಕೆಂಬ ಸತ್ಯಕ್ಕೆ ಚ್ಯುತಿ ಇಲ್ಲ. ಅಲ್ಲದೆ ಭ್ರಮೆಗಳು ಚೆದುರಿದ ಮೇಲೆ ಜಾಗತೀ ಕರಣದ ಮೌಲಿಕ ಉಪಯೋಗಗಳು ನಮ್ಮ ಬದುಕನ್ನು ಆವರಿಸಿದಾಗ ಈ ಭ್ರಮೆಯ ಕಾಲದಲ್ಲಿ ನಾವು ಪಟ್ಟ ಕಷ್ಟ ಅಷ್ಟೊಂದು ದುಬಾರಿ ಯಾಗಲಿಲ್ಲವೇನೊ ಎನ್ನಿಸಬಹುದು. ಹೀಗೆ ಜಾಗತೀಕರಣದಿಂದ ಒಳಿತನ್ನೇ ಆಶಿಸೋಣ. ❑

## ಜಾಗತೀಕರಣದ ಕರಾಳಹಸ್ತ

ಬಂಡವಾಳಶಾಹಿಯ ಜಾಗತೀಕರಣವು ಒಂದು ಹೊಸ ಸಂಸ್ಕೃತಿಯನ್ನು ಸೃಷ್ಟಿಸುತ್ತಿದೆ. ಅದರ ಸಾಂಕೇತಿಕ ರೂಪಗಳು ಯಾವುವೆಂದರೆ CNN, ಕೋಕಾ-ಕೋಲ, ಮ್ಯಾಕ್‌ಡೊನಾಲ್ಡ್ಸ್ ಮತ್ತು ಲೆವಿಸ್, ಪಾಪ್ ಸಂಗೀತ, ವ್ಯಾಪಾರ ಪ್ರಾಕಾರಗಳು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು, ಹೋಟೆಲುಗಳ ಸರಮಾಲೆ ಮತ್ತು ಅಧಿವೇಶನಗಳು. ಈ ಸಂಸ್ಕೃತಿಯಲ್ಲಿ ಪೂರ್ಣ ಭಾಗಿಗಳಾಗುವ ವಿಶೇಷ ಹಕ್ಕುಗಳುಳ್ಳ ಅಲ್ಪಮಂದಿಗೆ ಉತ್ತೇಜಕವಾದ, ವಿಸ್ತೃತವಾದ ಹೊಸ ಹೊಸ ಅವಕಾಶಗಳನ್ನೂ ಅನುಭವಗಳನ್ನೂ ಇದು ಒದಗಿಸುತ್ತದೆ. ಆದರೆ ವಿಶೇಷವಾಗಿ ಅಪಾಶ್ಚಿಮಾತ್ಯ ದೇಶಗಳಲ್ಲಿ ವಾಸಿಸುವ ಬಹುಸಂಖ್ಯಾತರಿಗೆ ಇದು ಪರಕೀಯವೂ ಭಯಾನಕವೂ ಆಗಿ ಕಾಣುತ್ತದೆ. ಅವರು ಈ ಆಧುನಿಕತೆಯ ಫಲಭಾಗಿಗಳಾಗಿರುವುದಕ್ಕಿಂತ ಅದರ ಬಲಿಪಶುಗಳಾಗಿದ್ದಾರೆ ಎನ್ನಬಹುದು. ಆದ್ದರಿಂದ ಅವರಲ್ಲನೇಕರು ಕಾತರತೆಯಿಂದ, ತಿರಸ್ಕಾರದಿಂದ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿರುವರು. ಹಾಗೂ ತಮ್ಮದೇ ಆದ ಸಾಂಪ್ರದಾಯಿಕ ಮೌಲ್ಯಗಳು ಮತ್ತು ಸಂಸ್ಕೃತಿಗಳನ್ನು ಆಶ್ರಯಿಸುತ್ತಿರುವರು ಮತ್ತು ಅವುಗಳೊಡನೆ ತಮ್ಮನ್ನು ಒಂದಾಗಿಸಿಕೊಳ್ಳುತ್ತಿರುವರು.

—Maurice Strong, The New South, The World Today, November 1995, p 215